**All India Radio: Bangalore**
**National Bulletins In Kannada**
**09.07.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09.07.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಮುಂದಿನ ಐದು ವರ್ಷಗಳಲ್ಲಿ ಭಾರತ-ಬ್ರೆಜಿಲ್ ದ್ವಿಪಕೀಯ ವ್ಯಾಪರ ೨೦ ಶತ ಕೋಟಿ ಡಾಲರ್‌ಗೆ ವೃದ್ಧಿ- ಪ್ರಧಾನಿ ನರೇಂದ್ರ ಮೋದಿ

೨. ಪಂಚ ರಾಷ್ಟ್ರಗಳ ಪ್ರವಾಸದ ಕೊನೆ ಚರಣದಲ್ಲಿಂದು ಪ್ರಧಾನಿ ನಮಿಬಿಯಾಕ್ಕೆ ಪ್ರಯಾಣ; ಆರ್ಥಿಕ ಪಾಲುದಾರಿಕೆಯ ಮಾರ್ಗಗಳ ಅನ್ವೇಷಣೆಯ ನಿರೀಕ್ಷೆ

೩. ಮೀರತ್‌ನಲ್ಲಿ ಕೃಷಿ ತಂತ್ರಜ್ಞಾನ ನಾವೀನ್ಯತೆ ಕೇಂದ್ರ ಉದ್ಘಾಟಿಸಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್

೪. ವಿಂಬಲ್ಡನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್; ಅರಿನಾ ಸಬಲೆಂಕಾ ಸೆಮಿ ಫೈನಲ್‌ಗೆ ಲಗ್ಗೆ

**<><*<><>*><>**

೧೨.೨ ಬಿಲಿಯನ್ ಡಾಲರ್ ಇರುವ ಭಾರತ-ಬ್ರೆಜಿಲ್ ದ್ವಿಪಕ್ಷೀಯ ವ್ಯಾಪಾರವನ್ನು ಮುಂದಿನ ಐದು ವರ್ಷಗಳಲ್ಲಿ ೨೦ ಬಿಲಿಯನ್ ಡಾಲರ್‌ಗೆ ವೃದ್ಧಿಸುವ ಗುರಿಯನ್ನು ನಿಗದಿಪಡಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಬ್ರೆಜಿಲ್‌ನ ಬ್ರೆಸಿಲಿಯಾ ನಗರದಲ್ಲಿ ಬ್ರೆಜಿಲ್ ಅಧ್ಯಕ್ಷ ಲುಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ ಅವರೊಂದಿಗೆ ನಡೆದ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತ ಮತ್ತು ಬ್ರೆಜಿಲ್ ಮೆರ್ಕೋಸುರ್ ಆದ್ಯತೆಯ ವ್ಯಾಪಾರ ಒಪ್ಪಂದವನ್ನು ಹೆಚ್ಚಿನ ಉತ್ಪನ್ನಗಳನ್ನು ಒಳಗೊಂಡಂತೆ ವಿಸ್ತರಿಸಿ, ಭಾರತೀಯ ರಫ್ತುಗಾರರಿಗೆ ಮಾರುಕಟ್ಟೆ ಪ್ರವೇಶವನ್ನು ಸುಲಭಗೊಳಿಸಲು ಒಟ್ಟಿಗೆ ಕೆಲಸ ಮಾಡಲಿವೆ. ಮೆರ್ಕೋಸುರ್, ಒಂದು ಪ್ರಾದೇಶಿಕ ವ್ಯಾಪಾರ ಸಂಘಟನೆಯಾಗಿದ್ದು, ಬ್ರೆಜಿಲ್, ಅರ್ಜೆಂಟೀನಾ, ಪೆರೆಗ್ವೆ ಮತ್ತು ಉರುಗ್ವೆ ಇದರ ಸದಸ್ಯ ರಾಷ್ಟ್ರಗಳಾಗಿವೆ. ಸುದ್ದಿಗೋಷ್ಠಿಯಲ್ಲಿ ಪ್ರಧಾನಿ, ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ ಅನ್ನು ಬ್ರೆಜಿಲ್‌ನಲ್ಲಿ ಅಳವಡಿಸುವ ಯೋಜನೆವನ್ನು ಘೋಷಿಸಿದರು. ಇದು ಭಾರತದ ಡಿಜಿಟಲ್ ಪಾವತಿ ತಂತ್ರಜ್ಞಾನ ಮಾದರಿಯನ್ನು ಅನುಸರಿಸುತ್ತದೆ. ಕೃಷಿ, ಆಹಾರ ಸಂಸ್ಕರಣೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ ಹೆಚ್ಚಿಸಲು ಪ್ರಧಾನಿ ಒತ್ತು ನೀಡಿದರು. ಕೃಷಿ ತಂತ್ರಜ್ಞಾನ ಮತ್ತು ಮೌಲ್ಯವರ್ಧಿತ ಆಹಾರ ರಫ್ತುಗಳನ್ನೂ ವಿಸ್ತರಿಸುವ ಉದ್ದೇಶ ವ್ಯಕ್ತಪಡಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೧೬ ಸೆಕೆಂಡ್ಸ್)

ಇದೇ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬ್ರೆಜಿಲ್ ದೇಶದ ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕಾಲರ್ ಆಫ್ ದಿ ನ್ಯಾಷನಲ್ ಆರ್ಡರ್ ಆಫ್ ದಿ ಸದರ್ನ್ ಕ್ರಾಸ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಯನ್ನು ಬ್ರೆಜಿಲ್ ಅಧ್ಯಕ್ಷರು ಪ್ರಧಾನಿಯವರ ಜಾಗತಿಕ ವೇದಿಕೆಗಳಲ್ಲಿ ಭಾರತ-ಬ್ರೆಜಿಲ್ ಸಂಬಂಧಗಳನ್ನು ಬಲಪಡಿಸಲು ನೀಡಿದ ಮಹತ್ವದ ಕೊಡುಗೆಗಳಿಗೆ ಗೌರವವಾಗಿ ಪ್ರದಾನ ಮಾಡಿದರು. ಭಾರತ-ಬ್ರೆಜಿಲ್ ದ್ವಿಪಕ್ಷೀಯ ಮಾತುಕತೆಗಳ ನಂತರ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪೂರ್ವ ವಿಭಾಗದ ಕಾರ್ಯದರ್ಶಿ ಪೆರಿಯಸಾಮಿ ಕುಮಾರನ್ ಸುದ್ದಿಗೋಷ್ಠಿ ನಡೆಸಿ, ಮಾತುಕತೆಗಳ ಪ್ರಮುಖ ಅಂಶಗಳನ್ನು ಹಂಚಿಕೊಂಡರು. ಬ್ರೆಜಿಲ್ ಅಧ್ಯಕ್ಷರು ಕಡಿಮೆ ವೆಚ್ಚದ ಭಾರತೀಯ ಔಷಧಿಗಳಿಗೆ ತಮ್ಮ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರವೇಶ ನೀಡುವ ಕಲ್ಪನೆಗೆ ಒಮ್ಮತ ಸೂಚಿಸಿದ್ದಾರೆ. ಭಾರತೀಯ ವ್ಯಾಪಾರಿಗಳಿಗೂ ಪ್ರವಾಸಿಗರಿಗೂ ವೀಸಾ ಸುಧಾರಣೆಯ ಕುರಿತಾದ ಚರ್ಚೆಗಳೂ ನಡೆದಿವೆ. ಬ್ರೆಜಿಲ್‌ನಲ್ಲಿ ಭಾರತೀಯ ಔಷಧ ತಯಾರಿಕಾ ಕಂಪನಿಗಳನ್ನು ಸ್ಥಾಪಿಸಲು ಆಹ್ವಾನ ನೀಡುವ ಪ್ರಸ್ತಾಪಕ್ಕೂ ಬ್ರೆಜಿಲ್ ಪ್ರತಿನಿಧಿಗಳು ಒಪ್ಪಿಗೆ ಸೂಚಿಸಿದ್ದಾರೆ. ಬ್ರೆಜಿಲ್‌ನ ಅಮೂಲ್ಯ ಖನಿಜ ಸಂಪತ್ತಿನಲ್ಲಿ ಭಾರತೀಯ ಹೂಡಿಕೆದಾರರಿಗೆ ಪ್ರವೇಶ ನೀಡುವ ಬಗ್ಗೆ ಕೂಡ ಚರ್ಚೆ ನಡೆಯಿತು. ಮಾತುಕತೆಗಳ ಸಮಯದಲ್ಲಿ ಭಾರತ-ಬ್ರೆಜಿಲ್ ನಡುವೆ ಭಯೋತ್ಪಾದನೆ ಹಾಗೂ ಅಂತರಾಷ್ಟ್ರೀಯ ಅಪರಾಧಗಳ ಕುರಿತು ಗುಪ್ತಚರ ವಿನಿಮಯ, ಜೈವಿಕ ಇಂಧನ, ಎಥೆನಾಲ್ ಮಿಶ್ರಿತ ಇಂಧನದ ಕುರಿತು ಸಹಕಾರ, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಹಭಾಗಿತ್ವ ಎಂಬ ಮೂರು ಮಹತ್ವದ ಒಪ್ಪಂದಗಳಿಗೆ ಸಹಿ

ಹಾಕಲಾಗಿದೆ.  ಉಭಯ ರಾಷ್ಟ್ರಗಳು ಕೃಷಿ ಸಂಶೋಧನೆ, ಗೌಪ್ಯ ಮಾಹಿತಿ ವಿನಿಮಯ ಮತ್ತು ಬೌದ್ಧಿಕ ಸ್ವತ್ತಿನ ಹಕ್ಕು ವ್ಯವಸ್ಥೆಯ ಕುರಿತಾದ ಮೂರು ಒಪ್ಪಂದಗಳಿಗೆ ಶೀಘ್ರದಲ್ಲಿ ಸಹಿ ಹಾಕುವ ನಿರೀಕ್ಷೆಯಿದೆ ಎಂದು ಕುಮಾರನ್ ತಿಳಿಸಿದರು.

<><*<><>*><>

ಪಂಚ ರಾಷ್ಟ್ರಗಳ ಪ್ರವಾಸದ ತಮ್ಮ ಕೊನೆಯ ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು, ಇಂದು ನಮಿಬಿಯಾ ಅಧ್ಯಕ್ಷೆ ನೆಟುಂಬೊ ನಾಂಡಿ ಎನ್‌ಧೈತ್ವಾ ಅವರ ಆಹ್ವಾನದ ಮೇರಿಗೆ ನಮಿಬಿಯಾದ ವಿಂಡ್‌ವೋಕ್‌ಗೆ ತೆರಳಲಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿಯವರ ನಮಿಬಿಯಾಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ. ಭಾರತೀಯ ಪ್ರಧಾನಮಂತ್ರಿಯೊಬ್ಬರು ೨೭ ವರ್ಷಗಳ ನಂತರ ಕೈಗೊಳ್ಳುತ್ತಿರುವ ಹಾಗೂ ಒಟ್ಟಾರೆ ಮೂರನೇ ಭೇಟಿ ಇದಾಗಿದೆ. ತಮ್ಮ ಭೇಟಿಯ ವೇಳೆ ಪ್ರಧಾನಿ, ನಮಿಬಿಯಾ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ನಿಯೋಗ ಮಟ್ಟದ ಮಾತುಕತೆಗಳೂ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ನಮಿಬಿಯಾ ಸಂಸತನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಪ್ರಧಾನಿ, ಸಂಸ್ಥಾಪಕ ರಾಷ್ಟ್ರಪಿತ ಹಾಗೂ ನಮಿಬಿಯಾದ ಪ್ರಥಮ ಅಧ್ಯಕ್ಷ ಡಾ.ಸ್ಯಾಮ್ ನುಜೊಮಾ ಅವರಿಗೆ ಗೌರವ ನಮನ ಸಲ್ಲಿಸಲಿದ್ದಾರೆ.  ಪ್ರಧಾನಿಯವರ ನಮಿಬಿಯಾ ಪ್ರವಾಸದ ಕುರಿತು ಮಾಹಿತಿ ನೀಡಿರುವ ನಮಿಬಿಯಾದ ಭಾರತೀಯ ರಾಯಭಾರಿ ರಾಹುಲ್ ಶ್ರೀವಾಸ್ತವ್, ನಮಿಬಿಯಾ ಒಂದು ಸಂಪನ್ಮೂಲಭರಿತ ರಾಷ್ಟ್ರವಾಗಿದ್ದು, ತೈಲ ಮತ್ತು ಅನಿಲ, ಹೈಡ್ರೋ ಕಾರ್ಬನ್, ನಿರ್ಣಾಯಕ ಖನಿಜಗಳು ಸೇರಿದಂತೆ ವಿವಿಧ ಹೊಸ ಕ್ಷೇತ್ರಗಳಲ್ಲಿ ಆರ್ಥಿಕ ಪಾಲುದಾರಿಕೆಯನ್ನು ಅನ್ವೇಷಿಸುವುದರ ಮೇಲೆ ಪ್ರಧಾನಿಯವರ ಈ ಭೇಟಿ ಕೇಂದ್ರೀಕರಿಸಲಿದೆ.ಭಾರತದ ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ ಕೂಡ ಮಾತುಕತೆಯ ಪ್ರಮುಖ ಅಂಶವಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಇದಲ್ಲದೆ, ನಮಿಬಿಯಾ ಭಾರತ ಆರಂಭಿಸಿರುವ ಕೆಲವು ಜಾಗತಿಕ ಉಪಕ್ರಮಗಳಾದ ವಿಪತ್ತು ನಿರೋಧಕ ಮೂಲ ಸೌಕರ್ಯ ಒಕ್ಕೂಟ, ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಸಂಘಟನೆ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟಕ್ಕೆ ಸೇರ್ಪಡೆಯಾಗುವ ನಿರೀಕ್ಷೆಯಿದೆ.

<><*<><>*><>

ಮೀರತ್‌ನ ಸರ್ದಾರ್ ವಲ್ಲಭ್ ಭಾಯ್ ಪಟೇಲ್ ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ ತಂತ್ರಜ್ಞಾನ ನಾವೀನ್ಯತೆ ಕೇಂದ್ರವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನಿನ್ನೆ ಉದ್ಘಾಟಿಸಿದರು.  ಈ ವೇಳೆ ಅವರು, ರೈತರನ್ನು ಉದ್ಯಮಿಗಳನ್ನಾಗಿ ಪರಿವರ್ತಿಸುವ ಸರ್ಕಾರದ ಪ್ರಯತ್ನವನ್ನು ಒತ್ತಿ ಹೇಳಿದರು. ಕೃಷಿ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ಮತ್ತು ನ್ಯಾಯಯುತ ಬೆಲೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರದ ಕುರಿತು ಅವರು ವಿವರಿಸಿದರು. ರೈತ ಕೇಂದ್ರಿತ ಸಂಶೋಧನೆ ಮತ್ತು ನವೋದ್ಯಮಗಳನ್ನು ಉತ್ತೇಜಿಸಲು ಸಚಿವರು, ವಿಶ್ವವಿದ್ಯಾಲಯದಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರದ ಸ್ಥಾಪನೆ ಕುರಿತು ಘೋಷಿಸಿದರು. ಕೇಂದ್ರ ಸಚಿವರಾದ ಜಯಂತ್ ಚೌಧರಿ ಮತ್ತು ಸೂರ್ಯ ಪ್ರತಾಪ್ ಶಾಹಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

<><*<><>*><>

ಚೀನಾ,ಪಾಕಿಸ್ತಾನ ಮತ್ತು ಬಾಂಗ್ಲಾದೇಶ ನಡುವೆ ಹಿತಾಸಕ್ತಿಗಳ ಒಮ್ಮತ ಭಾರತಕ್ಕೆ ಭದ್ರತಾ ಸವಾಲು ತಂದೊಡ್ಡುವ ಸಾಧ್ಯತೆಯಿದೆ ಎಂದು ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ. ಅಬ್ಸರ್‌ವರ್ ಸಂಶೋಧನಾ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಹಿಂದೂ ಮಹಾಸಾಗರ ಪ್ರದೇಶದ ಹಲವು ರಾಷ್ಟ್ರಗಳಲ್ಲಿ ಇತ್ತೀಚೆಗೆ ಉಂಟಾಗಿರುವ ಆರ್ಥಿಕ ಸಂಕಷ್ಟದ ಪರಿಸ್ಥಿತಿಗಳಿಂದಾಗಿ ಹೊರಗಿನ ಶಕ್ತಿಗಳಿಗೆ ತಮ್ಮ ಪ್ರಭಾವ ವಿಸ್ತರಿಸಿಕೊಳ್ಳಲು ಅವಕಾಶ ನೀಡಿದೆ. ಇದರಿಂದ ಭಾರತಕ್ಕೆ  ಭದ್ರತಾ ಅನಿಶ್ಚಿತತೆ ಎದುರಾಗಬಹುದು ಎಂದರು.

<><*<><>*><>

ನೌಕರರ ಭವಿಷ್ಯ ನಿಧಿ ಸಂಸ್ಥೆ - ಇಪಿಎಫ್‌ಒ ಹಿಂದಿನ ಹಣಕಾಸು ವರ್ಷ ೨೦೨೪-೨೦೨೫ರ ಬಡ್ಡಿಯನ್ನು ತನ್ನ ಶೇಕಡಾ ೯೬ ಕ್ಕೂ ಹೆಚ್ಚು ಸದಸ್ಯರಿಗೆ ಜಮಾ ಮಾಡಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ತಿಳಿಸಿದ್ದಾರೆ. ನವದೆಹಲಿಯಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಸಚಿವರು, ಈವರೆಗೆ ೩೨ ಕೋಟಿ ೪೦ ಲಕ್ಷ ಸದಸ್ಯರ ಖಾತೆಗಳಿಗೆ ಬಡ್ಡಿ ಜಮಾ ಮಾಡಲಗಿದೆ. ಉಳಿದ ಖಾತೆಗಳ ಮೇಲಿನ ಬಡ್ಡಿಯನ್ನು ಈ ವಾರ ಜಮಾ ಮಾಡುವ ನಿರೀಕ್ಷೆಯಿದೆ. ಕೇಂದ್ರ ಸರ್ಕಾರ ಬಡ್ಡಿದರವನ್ನು ಅನುಮೋದಿಸಿದ ನಂತರ ಎರಡು ತಿಂಗಳೊಳಗೆ ತಮ್ಮ ಸಚಿವಾಲಯವು ಶೀಘ್ರದಲ್ಲೇ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದೆ ಎಂದು ಅವರು ತಿಳಿಸಿದರು.

<><*<><>*><>

೨೦೨೬ನೇ ಸಾಲಿನ ಹಜ್ ಯಾತ್ರೆಗಾಗಿ ಯಾತ್ರಾರ್ಥಿಗಳಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಹಜ್ ಸಮಿತಿ ನಿನ್ನೆಯಿಂದ ಅಧಿಕೃತ ಚಾಲನೆ ನೀಡಿದೆ. ಯಾತ್ರಾರ್ಥಿಗಳು ಅರ್ಜಿಗಳನ್ನು, ಅಧಿಕೃತ ಹಜ್ ಪೋರ್ಟಲ್ ಅಥವಾ 'ಹಜ್ ಸುವಿಧಾ' ಮೊಬೈಲ್ ಆಪ್ ಮೂಲಕ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ತಿಂಗಳ ಕೊನೆಯವರೆಗೆ ಅವಕಾಶವಿದೆ.

<><*<><>*><>

ಲಂಡನ್‌ನ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ನಡೆದ ೨೦೨೫ ರ ವಿಂಬಲ್ಡನ್‌ನ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ  ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರ್ತಿ ಅರಿನಾ ಸಬಲೆಂಕಾ ಜರ್ಮನಿಯ ಲಾರಾ ಸೀಗೆಮಂಡ್ ಅವರನ್ನು ಮಣಿಸಿ, ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಆರಂಭಿಕ ಸೆಟ್ ಅನ್ನು ಕಳೆದುಕೊಂಡ ನಂತರ, ಬೆಲರಸ್‌ನ ಸಬಲೆಂಕಾ ಕ್ವಾರ್ಟರ್ ಫೈನಲ್‌ನಲ್ಲಿ ೪-೬, ೬-೨, ೬-೪ ಅಂತರದಲ್ಲಿ ಗೆಲುವು ಸಾಧಿಸಿದರು. ಸಬಲೆಂಕಾ ನಾಳೆ ಸೆಮಿಫೈನಲ್‌ನಲ್ಲಿ ಅಮೆರಿಕದ ಉದಯೋನ್ಮುಖ ತಾರೆ ಅಮಂಡಾ ಅನಿಸಿಮೊವಾ ಅವರನ್ನು ಎದುರಿಸಲಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**